ಮಂತವಿಗಳು

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಹಿಳಳನೇ ವಿಧಿಯಂತೆ ಒಂದು ನೋಟೀಸ್‌ನ್ನು ತಮಗೆ ಕೊಟ್ಟಿದ್ದೆ. ಇದರಲ್ಲಿ ವಿಶೇಷವಾದ ಸಂದರ್ಭ ಇರುವುದರಿಂದ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ನಾವು ಕಾವೇರಿ ಜಲವಿವಾದವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ತಮ್ಮಲ್ಲಿ ನಾನಿ ಬನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಾನೂ ಸಹ ಈ ರೈತರ ಸಹಕಾರ ಸಂಘದ ಸಾಲ ಮನ್ನಾ ಮಾಡುವ ಬಗ್ಗೆ, ಕೇಂದ್ರ ಸರ್ಕಾರದವರು ಈಗಾಗಲೇ ೫೦ಮಾನವನ್ನು ತೆಗೆದುಕೊಂಡು ಅದರಲ್ಲಿ ಅರ್ಧಭಾಗವನ್ನು ನಾವು ತುಂಬಿಕೊಡಂತ್ತೇವೆ ಎಂಬ ನಿಲುವನ್ನು ತೆಗೆದುಕೊಂಡಿದ್ದಾರೆ. ಅನೇಕ ರಾಜ್ಯಸರ್ಕಾರಗಳು ಇದರ ಬಗ್ಗೆ ಪ್ರಪೋಸಲ್ಸ್ ಕಳಿಸಿಕೊಟ್ಟಿವೆ. ಮುಳೆಗಾಲದ ಬಿತ್ತನೆ ಕೆಲಸ ಪ್ರಾರಂಭವಾಗುತ್ತಿದೆ ಆದ್ದರಿಂದ ಅತ್ಯಂತ ಪ್ರಮುಖವಾದಂಥ ಈ ವಿಷಯದ ಬಗ್ಗೆ ಚರ್ಚೆಗೆ ತಗೆದು ಕೊಳ್ಳಬೇಕೆಂದು ನಾನು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅತ್ಯಂತ ಮಹತ್ವರವಾದಂಥ ವಿಷಯ ಇದು. ರೈತರು ಇವತ್ತು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಪ್ರಶ್ನೋತ್ತರ ಕಾಲವನ್ನು ಮುಂದೂಡಿ ರೈತರ ಸಹಕಾರ ಸಂಘದ ಸಾಲ ಮನ್ನಾ ಮಾಡುವ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರನ್ನು ಮತ್ತು ಮಾನ್ಯ ಸಭಾನಾಯಕರನ್ನು ಈ ರಾಜ್ಯದ ರೈತರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಕಾವೇರಿ ವಿವಾದದ ಬಗ್ಗೆ ಚರ್ಚೆ ಮಾಡಬಹುದು. ರೈತರ ಸಹಕಾರಿ ಸಾಲ ಮನ್ನಾ ಬಗ್ಗೆ ಮುಖ್ಯಮಂತ್ರಿಗಳು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ, ಈ ಸಮಸ್ಯೆಯನ್ನು ನಾವು ಬೆಗೆಹರಿಸಿದ್ದೇವೆ. ಶ್ರೀ ಯಡಿಯೂರಪ್ಪನವರಿಗೆ ಇದು ಗೊತ್ತಿಲ್ಲ. ನಾವೇನೂ ನಾಲಾಯಕರಲ್ಲ. ಸಾಲ ರದ್ದಾಗಿದೆ ಎಂದು ಘೋಷಣೆ ಮಾಡಿದ್ದೇವೆ. ಆದ್ದರಿಂದ ವೃಥಾ ಕಾಲ ಹರಣ ಬೇಡವೆಂದು ನಾನು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎರಡು ಮುಖ್ಯವಾದಂಥ ಸಮಸ್ಯೆಗಳನ್ನು ಶೀಘ್ರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ವಿರೋಧಪಕ್ಷದ ಮಾನ್ಯ ನಾಯಕರಾದ ಶ್ರೀ ಚಂದ್ರೇಗೌಡರು ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಮಾನ್ಯ ಅಧ್ಯಕ್ಷರಿಂದ ನನಗೆ ಒಂದು ಪತ್ರ ಬಂದಿದೆ. ಆದ್ದರಿಂದ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ, ಅಷ್ಟೆ. It says "With reference to your Notice of Adjournment Motion regarding waiving of loans of farmers by Government. I am directed to state that the Hon. Speaker has withheld his consent to raise the same and the matter will be taken up for discussion under Rule 68 to-morrow". ಈ ಕಾರಣದಿಂದ ನಾನು ಪ್ರಸ್ತಾಪ ಮಾಡಲಿಲ್ಲ. ತಾವು ಅದಕ್ಕೆ ಒಪ್ಪಿಕೊಳ್ಳುವುದಾದರೆ ನನ್ನ ಅಡ್ಡಿ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ...

ಶ್ರೀ ಕೆ. ಎಸ್. ಈಶ್ವರಪ್ಪ.—ಇದರ ಜೊತೆಗೆ ಬಸ್ ದರದ ಬಗ್ಗೆ ನಿಲುವಳಿ ಸೂಚನೆಯನ್ನು ನಾನು ಕಳುಹಿಸಿದ್ದೇನೆ. ಮೂವತ್ತೈದು ಪರ್ಸೆಂಟ್‌ನಷ್ಟು ದರವನ್ನು ಏಟ್ಟಾಗಿ ಜಾಸ್ತಿ ಮಾಡಿದ್ದರಿಂದ ಇಡೀ ಕರ್ನಾಟಕದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ, ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ನನಗೆ ಅವಕಾಶಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎರಡು ವಿಚಾರಗಳನ್ನು ಶೀಘ್ರವಾಗಿ ಚರ್ಚೆ ಮಾಡಬೇಕು ಎನ್ನುವಂಥ ಸಲಹೆ ಮಾನ್ಯ ವಿರೋಧಪಕ್ಷದ ನಾಯಕರಿಂದ ಮತ್ತು ಈ ಸಭೆಯ ಬಿ.ಜೆ.ಪಿ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪ ಅವರಿಂದ ಬಂದಿದೆ.

ಶ್ರೀ ಎಂ. ಮಹದೇವ್.—ನಾವು ಸಹ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು.

ಶ್ರೀ ಶಿವಾನುವ ಎಚ್. ಕೌಜಲಗಿ.—ಕಾಲ ಬದಲಾಗಿದೆ. ಸರ್ಕಾರದ ಕಡೆಯಿಂದರೇ ನಿಲುವಳಿ ಸೂಚನೆಯನ್ನು ತಂದಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಕಾವೇರಿ ಜಲ ವಿವಾದದ ಬಗ್ಗೆ ಪ್ರಸ್ತುತ ಉಂಟಾದ ಪರಿಸ್ಥಿತಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು ಎಂದು ಪ್ರಶ್ನೆ ಇವತ್ತು ಬಂದಿದೆ. ಮತ್ತು ಇವತ್ತಿನ ಸಭೆಯ ಕಾರ್ಯಕಲಾಪಗಳನ್ನು ಎಲ್ಲಾ ಸ್ಥಗಿತಗೊಳಿಸಿ ಇದೊಂದನ್ನು ನಾವು ಪರಿಶೀಲನೆಗೆ ತೆಗೆದುಕೊಳ್ಳಬೇಕು ಎನ್ನುವಂಥ ಸಲಹೆಯನ್ನು ಏನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವೊತ್ತು ಈ ಪ್ರಶ್ನೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು, ಮತ್ತು ಸಾಲ ಮನ್ನಾ ಮಾಡುವ ಬಗ್ಗೆ ಬಿ.ಜೆ.ಪಿ. ನಾಯಕರಾದ ಶ್ರೀ ಯಡಿಯೂರಪ್ಪನವರು ಹೇಳಿದ್ದಾರೆ. ಈ ಪ್ರಶ್ನೆಯನ್ನು ನಾಳೆ ಸಭೆಯ ಕಾರ್ಯಕಲಾಪಗಳ ಜೊತೆಯಲ್ಲಿ, ಪ್ರಶ್ನೋತ್ತರ ಅದಕೂಡಲೇ ತೆಗೆದುಕೊಳ್ಳಬಹುದು. ಅಧ್ಯಕ್ಷರು ಯಾವುದಕ್ಕೆ ಮೊದಲು ಅಪ್ಪಣೆ ಕೊಡಿಸುತ್ತಾರೋ, ಅದನ್ನು ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಮತ್ತೆ ಬಸ್ ಚಾರ್ಜಿನ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಯಾವುದೇ ಆಗಲೀ, ತೀರ್ಮಾನ ಮಾಡುವುದು ಈ ಸಭೆಗೆ ಬಿಟ್ಟಿದ್ದುದು, ಸಭಾಧ್ಯಕ್ಷರಿಗೆ ಬಿಟ್ಟಿದ್ದುದು, ಯಾವ ಪ್ರಶ್ನೆಯನ್ನು ತೆಗೆದುಕೊಳ್ಳಬೇಕೆಂದು ತಾವು ಹೇಳುತ್ತೀರೋ, ಅದನ್ನೂ ನಾನು ಸ್ವಾಗತಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಸಭಾನಾಯಕರಲ್ಲಿ ನಾನು ವಿನಂತಿ ಮಾಡುವುದು ಇಷ್ಟೆ. ಅಧ್ಯಕ್ಷರು ಏನು ಅಪ್ಪಣೆ ಕೊಡಿಸುತ್ತಾರೋ, ಅದನ್ನು ಚರ್ಚೆ ಮಾಡುತ್ತೇವೆಂದು ಹೇಳುತ್ತೀರಿ. ಇವತ್ತು ಕಾವೇರಿ ನೀರಿನ ಜಲವಿವಾದವೂ ಅತ್ಯಂತ ಪ್ರಮುಖವಾದ ವಿಚಾರ, ಅದನ್ನು ಚರ್ಚೆ ಮಾಡುವುದಕ್ಕೆ ನಮ್ಮ ಅಡ್ಡಿ ಇಲ್ಲ, ಇದರ ಬಗ್ಗೆ ಎಲ್ಲಾ ಸದಸ್ಯರಿಗೂ ಕಳಕಳಿ ಇದೆ. ಆದರೆ ರೈತರ ಸಾಲದ ಬಗ್ಗೆ ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದರಿಂದ ಎಲ್ಲಾ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ. ಶ್ರಿಶಂಕು ಸ್ವರ್ಗದಲ್ಲಿರುವ ರೈತರಿಗೆ ಪರಿಹಾರ ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದ ಬಗ್ಗೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಪ್ರೊ. ಎಂ. ಡಿ. ನಂಜುಂಡಸ್ವಾಮಿಯವರು ತಮ್ಮ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ, ರೈತರ ಸಾಲವನ್ನು ರದ್ದು ಮಾಡಿದ್ದೇವೆಂದು ಹೇಳಿದ್ದಾರೆ. ನೀವು ಪ್ರಶ್ನೆ ಕೇಳಿದಿರಿ ಅವರು ಉತ್ತರ ಕೊಟ್ಟಿರುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸಭಾನಾಯಕರು ಈ ಮಾತನ್ನು ಹೇಳಿದರೆ, ಅದನ್ನು ನಾನು ಒಪ್ಪಿ ಕುಳಿತುಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ರೈತರ ಸಹಕಾರಿ ಸಾಲ ಮನ್ನಾ ಬಗ್ಗೆ ಮಾನ್ಯ ಸಭಾನಾಯಕರಿಂದ, ರೈತರ ಪರವಾಗಿ ನಿರ್ಣಯ ಬರಲಿ ಎನ್ನುವುದಕ್ಕೆ ಅವರು ಈ ಮಾತನ್ನು ಹೇಳಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮನಸ್ಸನ್ನು ಬದಲಿ ಮಾಡಬೇಕು, ರೈತರ ಪರವಾಗಿ ನಿರ್ಣಯ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಹದೇವ್.—ಕಾವೇರಿ ಬೇಸಿನ್ ವಿಚಾರಕ್ಕೆ ಮೊದಲು ಆದ್ಯತೆ ಕೊಟ್ಟು, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆನಂತರ ರೈತರ ಸಾಲ ವಸೂಲಾತಿ ಬಗ್ಗೆ ನಾಳೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮಲ್ಲಿ ನನ್ನ ಮನವಿ ಇಷ್ಟೆ. ಈ ಕಾವೇರಿ ನೀರಿನ ಪ್ರಶ್ನೆ ತುಂಬಾ ಗಂಭೀರವಾದ ಪ್ರಶ್ನೆ. ಇಂತಹ ಗಂಭೀರವಾದ ಪ್ರಶ್ನೆಯ ವಿಚಾರವನ್ನು ಇಂದಿನ ಎಲ್ಲಾ ಕಾರ್ಯಕ್ರಮಗಳನ್ನೂ ಬದಿಗೊತ್ತಿ, ಪ್ರತ್ಯೇಕವಾಗಿ ಈ ಕಾವೇರಿ ನೀರಿನ ವಿಚಾರವನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು, ಇದಲ್ಲದೆ, ಇನ್ನು ಬೇರೆ ಬೇರೆ ವಿಚಾರಗಳ ಬಗ್ಗೆಯೂ ಚರ್ಚೆ ಮಾಡಬೇಕಾಗಿದೆ ಇವತ್ತು ರಾಜ್ಯದಲ್ಲಿ ಹತ್ತಾರು ಕೋಟಿ ರೂಪಾಯಿಗಳ ಗ್ಯಾನೈಟ್ ಲೂಟಿಯಾಗಿದೆ, ಇದರ ಬಗ್ಗೆಯೂ ಚರ್ಚೆ ಮಾಡಬೇಕು. ಇದರಲ್ಲಿ ಹಣ ಕಲೆಕ್ಟ್ ಮಾಡಿದವರು ಯಾರು, ಎಲ್ಲಿ ಹೋಯಿತು, ಯಾರ ಬಾಯಿಗೆ ಹೋಯಿತು, ಇವತ್ತು ದೇಶದ ನೈಸರ್ಗಿಕ ಸಂಪತ್ತು ನಾಶವಾಗುತ್ತಿದೆ ಈ ಸರ್ಕಾರ ಬಂದ, ಆರು ತಿಂಗಳಲ್ಲಿ, ಈ ಸರ್ಕಾರದ ಮೇಲೆ ಒಂದು ದೊಡ್ಡ ಅಪಾದನೆಯ ಪಟ್ಟಿಯೇ ಇದೆ. ಇವೆಲ್ಲದಕ್ಕಿಂತ ಹೆಚ್ಚಾಗಿ, ಇವತ್ತು ಕಾವೇರಿ ವಿಚಾರ ಅತ್ಯಂತ ಪ್ರಮುಖವಾದ ಪ್ರಶ್ನೆ. ಆದ್ದರಿಂದ ಇವತ್ತಿನ ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಿ, ಕಾವೇರಿ ವಿಚಾರವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು, ರಾಜ್ಯದಲ್ಲಿ ಇದು ಪ್ರಾಮುಖ್ಯವಾದ ಪ್ರಶ್ನೆ. ಕೇಂದ್ರ ಸರ್ಕಾರದವರು ಇದರ ಬಗ್ಗೆ ಏನೇನೋ ಹೇಳುತ್ತಿದ್ದಾರೆ....

ಅಧ್ಯಕ್ಷರು.—ತಾವು ಎಲ್ಲಾ ವಿಚಾರಗಳನ್ನೂ ಚರ್ಚೆ ಸಮಯದಲ್ಲಿ ಹೇಳಿ. ಈಗ ಕಾವೇರಿ ವಿಚಾರದಲ್ಲಿ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಸರ್ವಾನುಮತದ ಒಪ್ಪಿಗೆ ಇದೆ. ಆದ್ದರಿಂದ ಮಿಕ್ಕ ಕಾರ್ಯಕ್ರಮಗಳನ್ನು ಸ್ಥಗಿತ ಮಾಡಿ ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ಕೋಟ್ಯಾಂತರ ಜನಗಳ ಆಸೆ ಆಕಾಂಕ್ಷೆಗಳಿಗೆ ಬರಸಿಡಿಲು ಬಡಿಯುವ, ಈ ಕಾವೇರಿ ಪ್ರಶ್ನೆಯು ವಿಚಾರದಲ್ಲಿ ವಿಕಪಕ್ಷೀಯವಾದ ನಿರ್ಧಾರವನ್ನು ತೆಗೆದುಕೊಳ್ಳದೇ ಹೋದರೆ, ಈ ಒಂದು ಕರಾಳ ಛಾಯೆ ಮುಂದಿನ ಪೀಳಿಗೆ ಮೇಲೆ ಬೀಳುತ್ತದೆ ಎನ್ನುವುದರಲ್ಲಿ ಎರಡು ಅಭಿಪ್ರಾಯ ಇಲ್ಲ. ಇದು ಅತ್ಯಂತ ಸೂಕ್ಷ್ಮವಾದ ಹಾಗೂ ಅತ್ಯಂತ ಗಂಭೀರವಾದ ವಿಚಾರ. ಆದ್ದರಿಂದ ಮಿಕ್ಕ ವಿಚಾರಗಳನ್ನು ಬದಿಗೊತ್ತಿ. ಕಾವೇರಿ ನೀರಿನ ಪ್ರಸ್ತಾಪದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಸ್ತಾವನ್ನು ಸದನದ ಮುಂದೆ ಮಂಡಿಸ ಬಹುದು.

ಕಾವೇರಿ ಜಲ ವಿವಾದದ ಪ್ರಸ್ತಾಪನೆ ಮತ್ತು ಚರ್ಚೆ

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ. ಅದು ಹೀಗಿದೆ. ತಮಿಳುನಾಡು ಮುಂತಾದ ರಾಜ್ಯಗಳು ಮತ್ತು ಕರ್ನಾಟಕ ರಾಜ್ಯದ ಮಧ್ಯೆ ಉಂಟಾಗಿರುವ ಕಾವೇರಿ ಜಲವಿವಾದದ ಪ್ರಸ್ತಾವನ್ನು ಮಂಡಿಸುತ್ತೇನೆ ಮತ್ತು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನ್ನು ಸಭೆಯ ಮುಂದೆ ಮಂಡಿಸಲಾಯಿತು.

೧೧–೩೫ ಎ. ಎಂ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ಜಲ ವಿವಾದ ಮತ್ತು ಅದರ ಇತಿಹಾಸ ಕರ್ನಾಟಕದ ಇಡೀ ಜನತೆಗೆ ಮತ್ತು ವಿಶೇಷವಾಗಿ ಕಾವೇರಿ ನದಿ ಪಾತ್ರದಲ್ಲಿರತಕ್ಕಂಥ ಎಲ್ಲರಿಗೂ ಗೊತ್ತಿದ್ದ ವಿಚಾರ. ಆದರೆ ಸುಮಾರು ಒಂದು ನೂರು ವರ್ಷಗಳ ನಂತರ ಕಾವೇರಿ ನದಿ ಜಲ ವಿವಾದವು ಒಂದು ಸೂಕ್ಷ್ಮ ಹಂತದಲ್ಲಿ ಇವತ್ತು ಬಂದು ನಿಂತಿದೆ. ಮಾನ್ಯ ಅಧ್ಯಕ್ಷರೇ ತಾವು ಪ್ರಸ್ತಾಪ ಮಾಡಿದ ಹಾಗೆ ಇದು ಒಂದು ಪ್ರಶ್ನೆ, ಇದು ಕರ್ನಾಟಕದ ಪ್ರಶ್ನೆ, ಕರ್ನಾಟಕದ ಜನತೆಯ ಪ್ರಶ್ನೆ ಇದು. ಇದು ಯಾವುದೋ ಒಂದು ರಾಜಕೀಯ ಪಕ್ಷದ ಪ್ರಶ್ನೆಯಲ್ಲ. ಆದಕ್ಕಾಗಿ ನಾವೆಲ್ಲ ನಮ್ಮ ಪಕ್ಷ ಆಶ್ರಮಗಳನ್ನು ಮರೆತು, ಪಕ್ಷದಿಂದ ಮೇಲಕ್ಕೆ ಎದ್ದು ಕರ್ನಾಟಕದ ಹಿತದೃಷ್ಟಿಯಿಂದ ಮತ್ತು ಕರ್ನಾಟಕದ ಜನತೆಯ ಹಿತ ದೃಷ್ಟಿಯಿಂದ ಇವತ್ತು ಉದ್ಭವಿಸಿರುವಂಥ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಬೇಕಾಗಿದೆ, ಸಮಾಲೋಚನೆ ಮಾಡಬೇಕಾಗಿದೆ ಮತ್ತು ಬಹಳ ಗಂಭೀರವಾಗಿ ಸಮಾಲೋಚನೆ ಮಾಡಬೇಕಾದಂಥ ಅಗತ್ಯವೂ ಇದೆ. ಕಾವೇರಿ ನದಿ ಜಲವಿವಾದದ ಪೂರ್ತಿ ಇತಿಹಾಸವನ್ನು ಇವತ್ತು ಸದನದ ಮುಂದೆ ಇಡುವುದಕ್ಕೆ ನಾನು ಹೋಗುವುದಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಆದರೆ ನಮ್ಮ ಪಕ್ಷ ಮತ್ತು ನಾನು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದ್ದೇವೆ ಮತ್ತು ಇವೊತ್ತು ಪರಿಸ್ಥಿತಿ ಯಾವ ರೀತಿ ಉದ್ಭವವಾಗಿದೆ ಎನ್ನುವುದರ ಬಗ್ಗೆ ಸೂಕ್ಷ್ಮ ಪರಿಚಯವನ್ನು ಈ ಸದನಕ್ಕೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಫೆಬ್ರುವರಿಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಯಾವರಿಗೆ ಬಂದು ಪತ್ರ ಬರೆದೆ, ಕಾವೇರಿ ನದಿ ಜಲ ವಿವಾದದ ಪ್ರಶ್ನೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದೆ, ಈ ಪ್ರಶ್ನೆಯನ್ನು ಪರಸ್ಪರವಾಗಿ ಚರ್ಚೆ ಮಾಡಿ, ವಿಚಾರ ಮಾಡಿ ಕೊಟ್ಟು ತೆಗೆದುಕೊಳ್ಳುವಂಥ ಮನೋಭಾವನೆಯಿಂದ ಬಗೆಹರಿಸಲಿಕ್ಕೆ ಸಾಧ್ಯವಿದೆ, ಆದಕ್ಕಾಗಿ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕಾಗಿ ನಾವು ಮನಸ್ಸು ಮಾಡಬೇಕು ಮತ್ತು ನಾವುಗಳು ಬಂದು ಕಡೆ ಸೇರಬೇಕು, ಆದಕ್ಕಾಗಿ ತಾವು ದಯಮಾಡಿ ಬೆಂಗಳೂರಿಗೆ ಬರಬೇಕೆಂದು ತಿಳಿಸಿದ್ದೆ. ೧೨ನೇ ಫೆಬ್ರುವರಿ ೧೯೯೦ಕ್ಕೆ ತಾವು ಬೆಂಗಳೂರಿಗೆ ಬರಬೇಕೆಂದು ನಾನು ಮೊದಲನೇ ಸಲ ಆಹ್ವಾನಿಸಿದ್ದೆ. ಆಗ ಅವರು ಒಪ್ಪಿಕೊಂಡಿದ್ದರು. ನಾವು ಕೂಡ ಅವರು ಬರುತ್ತಾರೆಂದು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೆವು. ದುರ್ದೈವದಿಂದ ಎರಡು ಕಾರಣಗಳಿಗಾಗಿ ಅವರು ಬರಲಿಲ್ಲ. ಅದು ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಒಂದು, ದೊಡ್ಡ ಪ್ಲೇನಿನ ದುರಂತವಾಯಿತು, ವಿಶ್ವನಾಥ್, ಇನ್ನೊಂದು ಕಾರಣ ನಮ್ಮ ಸಿಬ್ಬಂದಿ ವರ್ಗದವರು ಒಮ್ಮಿಂದೊಮ್ಮೆಗೆ ಸ್ಟ್ರೈಕ್‌ಗೆ ಹೋದರು. ಆದಕ್ಕಾಗಿ ನಾನು ಅವರಿಗೆ ಮತ್ತೆ ತಿಳಿಸಿದೆ. ಈ ಪರಿಸ್ಥಿತಿ ಯಲ್ಲಿ ಸೇರುವುದು ಕಷ್ಟವಾಗುತ್ತದೆ, ಅನಂತರ ಮತ್ತೊಂದು ದಿನಾಂಕ ನಿಗದಿ ಮಾಡಿ ಹೇಳುತ್ತೇನೆ ಆವಾಗ ಬರಬೇಕೆಂದು ಕೇಳಿಕೊಂಡಿದ್ದೆ. ಅದಾದ ಮೇಲೆ ಅದೇ ರೀತಿ ಇನ್ನೊಂದು ಸಲ ದಿನಾಂಕ